## 1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಡಗು, ಮಡಿಕೇರಿ

## ಸ್ಪೆಷಲ್ ಕೇಸ್: 54/2019

ಪ್ರಾಸಾ- 8
ಚಾಸಾ- 14

| | | |
|---|---|---|
| ಸಾಕ್ಷಿದಾರರ ಹೆಸರು | : | ಶರತ್ ಕುಮಾರ್ ವಿ |
| ತಂದೆಯ ಹೆಸರು | : | ವಾಣಿ ಪಿ.ಯು. |
| ವಯಸ್ಸು | : | 40 ವರ್ಷ |
| ವೃತ್ತಿ | : | ಚಾಲಕ |
| ವಾಸ | : | ರೆಂಜರ್ ಬ್ಲಾಕ್, ಸೋಮವಾರಪೇಟೆ. |

**ಸಾಕ್ಷಿಯನ್ನು ದಿನಾಂಕ 22-01-2024 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ**:

ನನಗೆ ಚಾಸಾ-15 ರವರನ್ನು ನೋಡಿ ಪರಿಚಯ ಇದೆ. ಅದೇ ರೀತಿ ಆರೋಪಿಯನ್ನು ನೋಡಿ ಪರಿಚಯ ಇದೆ. ಈಗ ನಾನು ನೋಡುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದ್ದು, ಅದನ್ನು ನಾನು 4 ವರ್ಷಗಳ ಮೊದಲು ಠಾಣೆಯಲ್ಲಿ ಹಾಕಿದ್ದೇನೆ. ಸೋಮವಾರಪೇಟೆ ಠಾಣೆಯಿಂದ ಮಹಜರ್ ಗೆ ಸಹಕರಿಸಲು ನನ್ನನ್ನು ಕರೆದ ಕಾರಣ ನಾನು ಠಾಣೆಗೆ ಹೋಗಿದ್ದೆ. ಅಲ್ಲಿ ಪೊಲೀಸರು ಅಲ್ಲದೆ ಆರೋಪಿ ಹಾಗೂ ಚಾಸಾ-15 ಇದ್ದರು. ನಾನು ಠಾಣೆಗೆ ಹೋದ ಸಂದರ್ಭದಲ್ಲಿ ಠಾಣೆಯಲ್ಲಿ ಕೋವಿ ಇತ್ತು. ಸದರಿ ಕೋವಿಯನ್ನು ಪೊಲೀಸರು ಪೊಲೀಸ್ ಜೀಪಿನಲ್ಲಿ ಹಾಕಿ ಆ ಬಳಿಕ ನಮ್ಮನ್ನು ಆರೋಪಿಯ ಮನೆಗೆ ಕರೆದುಕೊಂಡು ಹೋದರು. ಆರೋಪಿ ಕೋವಿಯನ್ನು ಪೊಲೀಸ್ ಜೀಪಿನಿಂದ ತೆಗೆದು ಗಾಡ್ರೇಜ್ ಬೀರುವಿನಲ್ಲಿ ಇಟ್ಟು ಅಲ್ಲಿಂದ ಪುನಃ ತೆಗೆದು ಹಾಜರುಪಡಿಸಿದ ಸಂದರ್ಭದಲ್ಲಿ ಪೊಲೀಸರು ಅದನ್ನು ಅಮಾನತ್ತು ಪಡಿಸಿಕೊಂಡರು. ಸದರಿ ಕೋವಿಯನ್ನು ಪೊಲೀಸರು ಬಿಳಿ ಬಟ್ಟೆಯಿಂದ ಸುತ್ತಿ ಪ್ಯಾಕ್ ಮಾಡಿದರು. ಪ್ಯಾಕ್ ಮಾಡುವ ಮೊದಲು ಸದರಿ ಕೋವಿಯನ್ನು ಪೊಲೀಸರು ತೆಗೆದಾಗ ಅದರಲ್ಲಿ ಒಂದು ಖಾಲಿ ತೋಟ ಇತ್ತು.

ಅದೇ ರೀತಿ ಆರೋಪಿ ತನ್ನ ಮನೆಯ ಶೆಡ್ಡಿನಿಂದ ಜೆನ್ ಕಾರನ್ನು ಹಾಜರುಪಡಿಸಿದನು. ಆ ಸಂದರ್ಭದಲ್ಲಿ ಪೊಲೀಸರು ಒಂದು ಬರವಣಿಗೆ ಮಾಡಿದ್ದು,

ಸದರಿ ಬರವಣಿಗೆಗೆ ನಾನು ಸಹಿ ಹಾಕಿದ್ದೇನೆ. ಸದರಿ ದಾಖಲಾತಿಯನ್ನು **ನಿಪಿ-8** ಎಂದು, ಅದರಲ್ಲಿ ಇರುವ ಸಾಕ್ಷಿ ಸಹಿಯನ್ನು **ನಿಪಿ-8(ಎ)** ಎಂದು ಗುರುತಿಸಲಾಯಿತು.

ಆ ಬಳಿಕ ಪೊಲೀಸರು ನಮ್ಮನ್ನು ರಸ್ತೆಯ ಒಂದು ಜಂಕ್ಷನ್ ಬಳಿಗೆ ಕರೆದುಕೊಂಡು ಬಂದರು. ಪ್ರಾಸಾ-1 ಹಾಗೂ ಆರೋಪಿ ಪರಸ್ಪರ ಎಳೆದಾಡಿದ ಸ್ಥಳವನ್ನು ಪೊಲೀಸರು ನನಗೆ ತೋರಿಸಿಕೊಟ್ಟರು. ಸದರಿ ಸ್ಥಳದಲ್ಲಿ ಸಹ ಪೊಲೀಸರು ಒಂದು ದಾಖಲಾತಿಯನ್ನು ತಯಾರಿಸಿದ್ದು, ಸದರಿ ದಾಖಲಾತಿಗೆ ನಾನು ಸಹಿ ಹಾಕಿದ್ದೇನೆ. ಸದರಿ ದಾಖಲಾತಿಯನ್ನು **ನಿಪಿ-9** ಎಂದು, ಅದರಲ್ಲಿ ಇದ್ದ ಸಾಕ್ಷಿ ಸಹಿಯನ್ನು **ನಿಪಿ-9(ಎ)** ಎಂದು ಗುರುತಿಸಲಾಯಿತು. ನಿಪಿ-8 ಹಾಗೂ 9 ರ ಸಂದರ್ಭದಲ್ಲಿ ಪೊಲೀಸರು ಫೋಟೊಗಳನ್ನು ತೆಗೆದಿದ್ದು, ಸದರಿ 15 ಫೋಟೊಗಳನ್ನು ಒಟ್ಟಾಗಿ **ನಿಪಿ-10** ಎಂದು ಗುರುತಿಸಲಾಯಿತು. ಈಗ ನಾನು ನೋಡುತ್ತಿರುವ ಗನ್ ಡಿಕ್ಲರೇಷನ್ ಹಾಗೂ ಕಾರಿನ ಆರ್.ಸಿ.ಆರೋಪಿ ಆತನ ಮನೆಯಿಂದ ಪೊಲೀಸರ ಎದುರು ನನ್ನ ಸಮಕ್ಷಮ ಹಾಜರಪಡಿಸಿದ್ದರು. ಸದರಿ ಗನ್ ಡಿಕ್ಲರೇಷನ್ ನ್ನು **ನಿಪಿ-11** ಎಂದು, ಸದರಿ ಆರ್.ಸಿ. ನ್ನು **ನಿಪಿ-12** ಎಂದು ಗುರುತಿಸಲಾಯಿತು. ಅದೇ ರೀತಿ ಕೋವಿ ಎಕ್ಸ್ಟೆಂಷನ್ certificate ಅನ್ನು **ನಿಪಿ-13** ಎಂದು ಗುರುತಿಸಲಾಯಿತು. ಈಗ ನಾನು ನೋಡುತ್ತಿರುವ ಕೋವಿಯನ್ನು ಪೊಲೀಸರು ನನ್ನ ಸಮಕ್ಷಮ ಅಮಾನತ್ತು ಪಡಿಸಿಕೊಂಡಿದ್ದು, ಅದನ್ನು ಮು.ಮಾ-1 ಎಂದು ಈಗಾಗಲೇ ಗುರುತಿಸಲಾಗಿದೆ.

**ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸೀಲಾದ ವಸ್ತುವನ್ನು ತೆರೆಯಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.**

ಈಗ ನಾನು ನೋಡುತ್ತಿರುವ ಖಾಲಿ ತೋಟ ನಾನು ಆ ದಿನ ಮು.ಮಾ-1 ರ ಕೋವಿಯಲ್ಲಿ ಇದ್ದ ಖಾಲಿ ತೋಟ ಆಗಿದ್ದು, ಅದನ್ನು **ಮು.ಮಾ-6** ಎಂದು ಗುರುತಿಸಲಾಯಿತು. ಮು.ಮಾ-6 ರ ಅಂಟಿಸಿದ ಚೀಟಿಯ ಮೇಲೆ ನನ್ನ ಸಹಿ ಇರುತ್ತದೆ.

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀಸವಾಲು ಮಾಡಲು ಅನಮುತಿ ಕೋರಿರುತ್ತಾರೆ. ಸಾಕ್ಷಿ ಪೊಲೀಸರ ಮುಂದೆ ನೀಡಿದ ಹೇಳಿಕೆ ಮತ್ತು ಮುಖ್ಯ ವಿಚಾರಣೆಯನ್ನು ಪರಿಶೀಲಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಲಾಗಿದೆ).**

**<u>ಪಾಟೀಸವಾಲು- ಸರ್ಕಾರಿ ಅಭಿಯೋಜಕರಿಂದ:</u>**

ನಾನು ITI ರವೆರೆ ವ್ಯಾಸಂಗ ಮಾಡಿದ್ದೇನೆ. ನಾನು ಯಾವುದೇ ರಾಜಕೀಯ ಪಕ್ಷಕ್ಕೆ ಸೇರಿಲ್ಲ. ಆರೋಪಿಯ ಭಾರತೀಯ ಜನತಾ ಪಕ್ಷಕ್ಕೆ ಸೇರಿದ್ದವರು ಎಂದು ಮಾಹಿತಿ ಇದೆ. ನನ್ನದು ಪಟ್ಟಣ ಪಂಚಾಯ್ತಿ.

ದಿನಾಂಕ 22-10-2019 ರಂದು ನಾನು ಠಾಣೆಗೆ ಹೋಗಿದ್ದೆ. ಆ ಸಂದರ್ಭದಲ್ಲಿ ಪೊಲೀಸರು ಆರೋಪಿಯನ್ನು ದಸ್ತಗಿರಿ ಮಾಡಿದ್ದರು ಎಂದರೆ ಸರಿ. ಆರೋಪಿ ಪ್ರಾಸಾ-1 ರವರಿಗೆ ಎರಡು ದಿನಗಳ ಮೊದಲು ಕಾನ್ವೆಂಟ್ ಜಂಕ್ಷನ್ ಹತ್ತಿರ ಕೋವಿಯಿಂದ ಹೊಡೆದಿದ್ದರು ಎಂಬ ಬಗ್ಗೆ ಮಾಹಿತಿ ಇತ್ತು ಎಂದರೆ ಸರಿ. ಕೋವಿಯಿಂದ ಆರೋಪಿ ಪ್ರಾಸಾ-1 ರವರಿಗೆ ಹೊಡೆದಿದ್ದರು ಎಂಬ ಕಾರಣಕ್ಕಾಗಿ ಆರೋಪಿಯನ್ನು ದಸ್ತಗಿರಿ ಮಾಡಿದ್ದರು ಎಂದರೆ ಸರಿ. ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿದಂತೆ ಕೋವಿ ಪೊಲೀಸ್ ಠಾಣೆಗೆ ಹೇಗೆ ಬಂದಿತ್ತು ಎಂದು ನನಗೆ ಗೊತ್ತಿಲ್ಲ. ಸಾಮಾನ್ಯವಾಗಿ ಕೃತ್ಯಕ್ಕೆ ಬಳಸಲಾದ ಹತ್ಯಾರುಗಳನ್ನು ಆರೋಪಿಯ ನಿರ್ದೇಶನದ ಮೇರೆಗೆ ಅವರ ಸ್ವಾಧೀನದಿಂದ ವಶಪಡಿಸಿಕೊಳ್ಳುತ್ತಾರೆ ಅಥವಾ ಕೃತ್ಯ ನಡೆದ ಸ್ಥಳದಿಂದ ವಶಪಡಿಸಿಕೊಳ್ಳುತ್ತಾರೆ ಎಂದರೆ ಸರಿ. ಠಾಣೆಯಿಂದ ಪೊಲೀಸರು ಸದರಿ ಕೋವಿಯನ್ನು ಜೀಪಿನಲ್ಲಿ ತೆಗೆದುಕೊಂಡು ಹೋಗಿ ಆರೋಪಿಯ ಮನೆಯ ಬೀರುವಿನಲ್ಲಿ ಇಟ್ಟಿರುವುದನ್ನು ಮತ್ತು ಅದನ್ನು ಬೀರುವಿನಿಂದ ಆರೋಪಿ ತೆಗೆದು ಪೊಲೀಸರಿಗೆ ಹಾಜರುಪಡಿಸಿರುವುದು ತಪ್ಪು ಎಂದು ನನಗೆ ಅನಿಸಿರಲಿಲ್ಲ. ನಾನು ಸದರಿ ದಾಖಲೆಗಳಿಗೆ ಸಹಿ ಹಾಕುವುದಿಲ್ಲ ಎಂದು ಪ್ರತಿಭಟನೆ ಮಾಡಿರುವುದಿಲ್ಲ. ನಾನು ಪೊಲೀಸ್ ಮೇಲಾಧಿಕಾರಿಗಳಿಗೆ ದೂರು ನೀಡಿರುವುದಿಲ್ಲ. ಸದರಿ ಕೋವಿ ಆರೋಪಿಯ ಮನೆಯ ಬೀರುವಿನಲ್ಲಿಯೇ ಇತ್ತು ಮತ್ತು ಅದನ್ನು ಆರೋಪಿಯೇ ಅದನ್ನು ಬೀರುವಿನಿಂದ ತೆಗೆದು ನಮ್ಮ ಸಮಕ್ಷಮ ಬೀರುವಿನಿಂದ ತೆಗೆದು ಹಾಜರುಪಡಿಸಿದರು ಎಂದರೆ ಸರಿಯಲ್ಲ. ಪೊಲೀಸರು ಮೊದಲೇ ಹೋಗಿ ಸದರಿ ಕೋವಿಯನ್ನು ಬೀರುವಿನಲ್ಲಿ ಇಟ್ಟಿದ್ದರು ಎಂದು ನಾನು ಸುಳ್ಳು ಸಾಕ್ಷಿ ಹೇಳುತಿದ್ದೇನೆ ಎಂದರೆ ಸರಿಯಲ್ಲ. ಕಾನ್ವೆಂಟ್‌ಬಾಣೆ ಜಂಕ್ಷನ್‌ನಲ್ಲಿ ಆರೋಪಿ ಪೊಲೀಸರಿಗೆ ನಮ್ಮ ಸಮಕ್ಷಮದಲ್ಲಿ ಕೋವಿ ಮಿಸ್ ಫಾಯರ್ ಆದ ಸ್ಥಳ ಎಂದು ಸಾಕ್ಷಿ ಹೇಳುತ್ತಾರೆ. ಆರೋಪಿ ಕೋವಿ ಮಿಸ್ ಫಾಯರ್ ಆದ ಸ್ಥಳ ಎಂದು ಪೊಲೀಸರಿಗೆ ತೋರಿಸಿಲ್ಲ ಎಂದರೆ ಸರಿಯಲ್ಲ. ಆರೋಕಪಿ ತಾನು ಪ್ರಾಸಾ-1 ರವರಿಗೆ ಗುಂಡು ಹೊಡೆದ ಸ್ಥಳ ಎಂದು ತೋರಿಸಿದ್ದಾರೆ ಎಂದರೆ ಸಾಕ್ಷಿ ಸದರಿ ಸ್ಥಳದಲ್ಲಿ ಎಳೆದಾಡುತಿದ್ದರು ಮತ್ತು ಅದು ಮಿಸ್ ಫಾಯರ್ ಆದ ಸ್ಥಳ ಎಂದು ಆರೋಪಿ ಪೊಲೀಸರಿಗೆ ಹೇಳುತಿದ್ದರು ಎಂದು ನುಡಿಯುತ್ತಾರೆ . ನಾನು ಮತ್ತು ಆರೋಪಿ ಒಂದೇ ಪಕ್ಷದಲ್ಲಿ ಇದ್ದೇವೆ ಮತ್ತು ಸ್ನೇಹಿತರು. ಆ ಕಾರಣದಿಂದ ಪೊಲೀಸ್ ಠಾಣೆಯಲ್ಲಿ ಮೊದಲೇ ಕೋವಿ ಇತ್ತು ಎಂದು ಆರೋಪಿ ಹೇಳಿಕೊಟ್ಟ ರೀತಿಯಲ್ಲಿ ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀಸವಾಲು- ಆರೋಪಿ ಪರವಾಗಿ ಶ್ರೀ. ಎ.ಜಿ.ಜಿ. ವಕೀಲರಿಂದ:</u>**

ಪೊಲೀಸ್ ಠಾಣೆಗೆ ನಾನು ಎಷ್ಟು ಗಂಟೆಗೆ ಹೋಗಿದ್ದೆ ಎಂದರೆ ಮಧ್ಯಾಹ್ನ ಊಟ ಮಾಡಿ 3.00 ಗಂಟೆಗೆ ಹೋಗಿದ್ದೆ ಎಂದು ನುಡಿಯುತ್ತಾರೆ. ನಾವು ಠಾಣೆಗೆ ಹೋಗಬೇಕಾದರೆ ಕೋವಿ ಠಾಣೆಯ ಟೇಬಲ್ ಮೇಲೆ ಇತ್ತು. ಕೋವಿಯನ್ನು ಪೊಲೀಸರು ಆರೋಪಿಯ ಮನೆಯ ಬೀರುವಿನಲ್ಲಿ ಇಟ್ಟು ಅಲ್ಲಿಂದ ಆರೋಪಿ ಕೋವಿಯನ್ನು ಹಾಜರುಪಡಿಸುವವರೆಗೂ ಆ ಸಂದರ್ಭದಲ್ಲಿ ಕೋವಿಯನ್ನು ತೆರೆಯುವ ವರೆಗೂ ಮತ್ತು ಅದರ ಒಳಗೆ ಖಾಲಿ ತೋಟ ಇತ್ತು ಎಂದು ನನಗೆ ಗೊತ್ತಿರಲಿಲ್ಲ. ಪೊಲೀಸರು ಕೋವಿಯನ್ನು ಆರೋಪಿಯ ಜೊತೆ ಬೀರುವಿನ ಒಳಗೆ ಇಡಬೇಕು ಎಂದು ಇರಿಸಿ ಆ ಬಳಿಕ ಬೀರುವಿನಿಂದ ಹೊರಗೆ ಆರೋಪಿ ತೆಗೆದರು. ಬೀರುವಿನಿಂದ ಹೊರಗೆ ಕೋವಿಯನ್ನು ತೆಗೆಯುವ ಸಂದರ್ಭದಲ್ಲಿ ಫೋಟೊಗಳನ್ನು ತೆಗೆದಿದ್ದಾರೆ ಎಂದರೆ ಸಾಕ್ಷಿ ಪೊಲೀಸರು ಹಾಗಾಗ ಫೋಟೊಗಳನ್ನು ತೆಗೆಯುತ್ತಿದ್ದರು ಯಾವಾಗ ತೆಗೆಯುತಿದ್ದರು ಎಂದು ನನಗೆ ಗೊತ್ತಿಲ್ಲ. ನಿಪಿ-10 ರ ಫೋಟೊಗಳದಲ್ಲಿ ಬೀರುವಿನ ಒಳಗಿನಿಂದ ಕೋವಿಯನ್ನು ತೆಗೆಯುತ್ತಿರುವುದು ಕಾಣುತ್ತಿಲ್ಲ ಎಂದರೆ ಸರಿ. ಪೊಲೀಸ್ ಠಾಣೆಯಿಂದ ಪೊಲೀಸರು ಕೋವಿಯನ್ನು ತಂದು ಆರೋಪಿಯ ಮನೆಯ ಟೇಬಲ್ ಮೇಲೆ ಇಟ್ಟು ಫೋಟೋಗಳನ್ನು ತೆಗೆದಿದ್ದಾರೆ ಎಂದರೆ ಸಾಕ್ಷಿ ಪೊಲೀಸರು ಕೋವಿಯನ್ನು ಆರೋಪಿಯ ಕೈಯಲ್ಲಿ ಬೀರುವಿನ ಒಳಗೆ ಇರಿಸಿ ಆ ಬಳಿಕ ಆರೋಪಿಯ ಮನೆಯ ಟೇಬಲ್ ಮೇಲೆ ಇರಿಸಿದರು ಎಂದು ನುಡಿಯುತ್ತಾರೆ. ನಿಪಿ-8 ರ ಮಹಜರ್ ನಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಸದರಿ ಮಹಜರ್ ಗೆ ನಾನು ಠಾಣೆಯಲ್ಲಿ ಸಹಿ ಹಾಕಿದ್ದೇನೆ. ಸದರಿ ಸಹಿಯನ್ನು ಯಾವ ಕಾರಣಕೊಸ್ಕರ ತೆಗೆದುಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ, ನಿಪಿ-8 ನ್ನು ನಾನು ಓದಿ ನೋಡಿಲ್ಲ. ಪೊಲೀಸರು ಸಹಿ ಹಾಕಲು ಹೇಳಿದ ಕಾರಣ ನಾನು ಸಹಿ ಹಾಕಿದ್ದೇನೆ.

**<u>ಮರುವಿಚಾರಣೆಃ</u>** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-xxx

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು, ಮಡಿಕೇರಿ